# ಆಶ್ಚರ್ಯವಾಗುವುದಿಲ್ಲ

ಈ ದೇಶದಲ್ಲಿ ಎಲ್ಲೆಂದರಲ್ಲಿ ಮಾಡಬಹುದು
ನಿಮಗಿಷ್ಟವಾದದ್ದನ್ನು. ಆಶ್ಚರ್ಯವಾಗುವುದಿಲ್ಲ
ಚಂದ್ರ ಚಂದ್ರನ ಹಾಗೆಯೇ
ಕಾಣಿಸಿದರೆ ಹೂವು ಹೂವಾಗಿಯೇ.
ನೀಲಿಯ ಬಾಲ್ಕನಿಯಿಂದ ಕವಿತೆಯೊಂದು
ಧುಮ್ಮಿಕ್ಕಿ ಮಾಡಿಕೊಂಡರೆ ಆತ್ಮಹತ್ಯೆ

ಮಾತಿಗೆ ಮಾತು ಸಡ್ಡುಹೊಡೆದದ್ದೆ ಆ ಕೊಠಡಿ
ಹೊತ್ತಿ ಉರಿಯಿತು. ಎರಡು ನೆರಳಿನ ಜಗಳ ಕೊನೆಗೂ
ಮುಗಿಯಿತು ಕರುಳು ಹಿಂಡುವ ಮೌನದಲ್ಲಿ.

ಊರ ಚೌಕಗಳಲ್ಲಿ ಪತಾಕೆಯೆತ್ತಿ ನಿಂತಿರುವ ಮಂದಿ
ಖಿನ್ನರಾದರು. ದಿಗಿಣಹಾಕಿದವು ಗಾಳಿಯಲ್ಲೇ
ತೆವಳಿಕೊಂಡು ಬಂದ ಕೊಳ್ಳಿದೆವ್ವಗಳು
ವಾಗ್ಮಿಗಳು ಸಿದ್ಧರಾಗಿ ನಿಂತರು ಚೂರಿ ಚೈನು
ಹಿಡಕೊಂಡವರ ಜೊತೆ
ಮಕ್ಕಳು ನಿಂತುಕೊಂಡವು ಒಂಟಿಗಾಲಲ್ಲಿ
ಕಿಮ್ಮಕ್ಕೆನ್ನದೆ

ದೇವರು ಪರಾರಿಯಾಗಿರುವ ಈ ದೇಶದಲ್ಲಿ
ನೋಡುವುದೆಂತು
ಯಾರು ಯಾರನ್ನೋ ಕೊಂದುಹಾಕಿದ್ದನ್ನು

ಸಾಯುವವರು ಸಾಯುತ್ತಾರೆ
ನೋಡುತ್ತ ಎಲ್ಲವನ್ನೂ.

